ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: **575/2023**

ಪಿಡಬ್ಲ್ಯೂ- **7**
ಸಿಡಬ್ಲ್ಯೂ-**15**

ಸಾಕ್ಷಿಗೆ ದಿನಾಂಕ **13.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಎಂ.ಡಿ ಫೈಜುಲ್ಲಾ |
| ಗಂಡನ ಹೆಸರು | : | ಎಂ.ಡಿ.ಗೌಸ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ಕನಕಗಿರಿ ಪೊಲೀಸ್ ಠಾಣೆ, ಕೊಪ್ಪಳ ಜಿಲ್ಲೆ |
| ವಾಸಸ್ಥಳ | : | ಕನಕಗಿರಿ |

ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ

ನಾನು ಜೂನ್ 2021 ರಿಂದ ಜನವರಿ 2023 ರವರೆಗೆ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 13.10.2022 ರಂದು ಪ್ರಕರಣದ ಕಡತವನ್ನು ಚಾ.ಸಾ-14 ರವರಿಂದ ಪರಿಶೀಲಿಸಿ ಪಡೆದುಕೊಂಡಿರುತ್ತೇನೆ.

ದಿ: 28.10.2022 ರಂದು ಚಾಸಾ -10 ರವರಿಂದ ಮೃತ ಶಂಕರಪ್ಪ ಪಿ ಎಂ ವರದಿ ಪಡೆದಿರುತ್ತೇನೆ .

ದಿ: 03.11.2022 ರಂದು ಪ್ರಕರಣದ ಆರೋಪಿ ಹಾಗೂ ವಾಹನ ಮಾಲೀಕರಾದ ಚಂದ್ರಶೇಖರ್ ರವರಿಂದ ಇಂಡೆಮಿನಿಟಿ ಬಾಂಡ್ ಪಡೆದು ಕೆಎ-16-ಎಕ್ಸ್ -7438 ರ ವಾಹನವನ್ನು ಅವರ ವಶಕ್ಕೆ ನೀಡಿರುತ್ತೇನೆ.

ನಂತರ ಸಂಪೂರ್ಣ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-16 ರವರಿಗೆ ವಹಿಸಿಕೊಟ್ಟಿರುತ್ತೇನೆ .

ಸಾಕ್ಷಿಯು ಮೃತ ಶಂಕರಪ್ಪ ರವರ ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿ ಬರೆದುಕೊಟ್ಟ ಇಂಡಿಮಿನಿಟಿ

ಬಾಂಡ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-12(ಎ) ಎಂದು ಗುರುತಿಸಲಾಯಿತು.

ಇಂಡೆಮಿನಿಟಿ ಬಾಂಡ್ ಪಡೆದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಿದ್ದು ಆತನ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ಸಲ್ಲಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಡಿ ಜಿ ವಕೀಲರಿಂದಃ

ನಾನು ಈ ಮೇಲೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿನಾಂಕ 13.10.2022 ರಂದು ನಾನು ಕಡತವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಮೃತರ ಮರಣೋತ್ತರ ವರದಿಯನ್ನು ನಾನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರ ವಶಕ್ಕೆ ನೀಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ . ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯ ಲ್ಲ. ಆರೋಪಿ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಸರಿಯಾದ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ ಅದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಹೊಸದುರ್ಗ.